# ಶೀಷಿಕೆ 3: ಬೋಧಕ ಸಿಬ್ಬಂದಿ ವಿವರ



| ಪ್ರೊ.ಚಂದ್ರಿಕಾ ಕೆ.ಬಿ. | |
|---|---|
| ಅಧ್ಯಾಪಕರ ಹೆಸರು : | ಪ್ರೊ.ಚಂದ್ರಿಕಾ ಕೆ.ಬಿ. |
| ವಿದ್ಯಾರ್ಹತೆ: | ಸಮಾಜಶಾಸ್ತ್ರದಲ್ಲಿ ಎಂ.ಎ.,<br>ಪಿಎಚ್.ಡಿ.<br>ಸಂಶೋಧನಾ ವಿಧಾನದಲ್ಲಿ<br>ಸರ್ಟಿಫಿಕೆಟ್ ಕೋರ್ಸ್<br>ಕಂಪ್ಯೂಟರ್ ತರಬೇತಿಯಲ್ಲಿ<br>ಸರ್ಟಿಫಿಕೆಟ್ ಕೋರ್ಸ್ |
| ಪ್ರಸ್ತುತ ಹುದ್ದೆ: | ಹಿರಿಯ ಪ್ರಾಧ್ಯಾಪಕರು<br>ಫಾಮರ್ ಚೇರ್‌ಪರ್ಸನ್,<br>ಡೈರೆಕ್ಟರ್, ಮಹಿಳಾ<br>ಸಬಲೀಕರಣ ಕೋಶ |
| ವೈಯಕ್ತಿಕ ಇ-Mail_id: | chandrikakb@rcub.ac.in<br>chandrikakb@rediffmail.com |
| ಸಂಪರ್ಕ ಸಂಖ್ಯೆ: | 9844420991 |

ಡಾ. ಕೆ. ಬಿ. ಚಂದ್ರಿಕಾರವರು ಕರ್ನಾಟಕದ ಶಿವಮೊಗ್ಗದ ಕುವೆಂಪು ವಿಶ್ವವಿದ್ಯಾಲಯದಿಂದ ಸಮಾಜಶಾಸ್ತ್ರದಲ್ಲಿ ಸ್ನಾತ್ತಕೋತ್ತರ ಪದವಿ ಪಡೆದು ಯುಜಿಸಿ NET& SLET ಅರ್ಹತೆಯೊಂದಿಗೆ ಪಿ.ಎಚ್.ಡಿ ಪದವಿಯನ್ನು ಪಡೆದಿದ್ದಾರೆ., ಪ್ರಸ್ತುತ ಸಮಾಜಶಾಸ್ತ್ರ ವಿಭಾಗದಲ್ಲಿ ಹಿರಿಯ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.. ಸಮಾಜವಿಜ್ಞಾನ ನಿಖಾಯದ ಡೀನರಾಗಿ ಸೇವೆ ಸಲ್ಲಿಸಿರುವ ಪ್ರೊ ಚಂದ್ರಿಕಾರವರು ಈ ಹಿಂದೆ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾಗಿ, ವಿದ್ಯಾರ್ಥಿ ಕಲ್ಯಾಣ ವಿಭಾಗದ ನಿರ್ದೇಶಕರಾಗಿ, ಅಕಾಡಮಿಕ್ ಕೌನ್ಸಿಲ್‌ನ ಸದಸ್ಯರಾಗಿ, ಪರೀಕ್ಷಾ ವಿಭಾಗ ಮತ್ತು ಆಡಳಿತ ವಿಭಾಗದಲ್ಲಿ ಉಪಕುಲಸಚಿವರಾಗಿ, ಎನ್.ಎಸ್.ಎಸ್. ಕೋಶದ ಸಂಯೋಜನಾಧಿಕಾರಿಯಾಗಿ, ಮಹಿಳಾ ಸಬಲಿಕರಣ ಕೋಶದ ಸಂಸ್ಥಾಪನಾ ಸದಸ್ಯ ಕಾರ್ಯದರ್ಶಿಯಾಗಿ ಮತ್ತು Good governance (E) ನೋಡಲ್ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದಾರೆ.

31 ವರ್ಷಗಳ ಬೋಧನಾ ಅನುಭವ ಹೊಂದಿರುವ ಡಾ. ಚಂದ್ರಿಕಾರವರ ವಿಶೇಷ ಪರಿಣಿತ ಕ್ಷೇತ್ರಗಳು ಲಿಂಗತ್ವ ಸಮಾಜಶಾಸ್ತ್ರ ಅಂಚಿನಲ್ಲಿರುವ ಮತ್ತು ದುರ್ಬಲ ಸಮೂಹಗಳ ಅಧ್ಯಯನಗಳು, ಸಂಶೋಧನಾ ವಿಧಾನಶಾಸ್ತ್ರ ಹಾಗೂ ಸಮಾಜಿಕ ಜನಸಂಖ್ಯಾ

ಶಾಸ್ತ್ರ.

ಇವರ ಮಾರ್ಗದರ್ಶನದಲ್ಲಿ 14 ವಿದ್ಯಾರ್ಥಿಗಳು ಪಿಎಚ್.ಡಿ. ಮತ್ತು 04 ವಿದ್ಯಾರ್ಥಿಗಳು ಎಂ.ಫಿಲ್. ಪದವಿ ಪ್ರದಾನವಾಗಿದೆ.. ಇವರು 33 ಅಂತರರಾಷ್ಟ್ರೀಯ, 12 ರಾಷ್ಟ್ರೀಯ ಮತ್ತು ಸಂಪಾದಿತ ಪುಸ್ತಕಗಳಲ್ಲಿ 14 ಪುಸ್ತಕಗಳು 11 ಲೇಖನಗಳು ಹಾಗೂ 3 ಕೃತಿಗಳನ್ನು ಪ್ರಕಟಗೊಂಡಿವೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಮ್ಮೇಳನಗಳಲ್ಲಿ 109 ಸಂಶೋಧನಾ ಪ್ರಬಂಧಗಳನ್ನು ಮಂಡಿಸಿದ್ದಾರೆ. . ಪಬ್ಲಿಕ್ ಹೆಲ್ತ್ ಇಂಜಿನಿಯರಿಂಗ್" ಕ್ಷೇತ್ರದಲ್ಲಿ UGC SAP ಅನುಧಾನದ ಅಡಿಯಲ್ಲಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಸಮಾಜಶಾಸ್ತ್ರ ವಿಭಾಗದಲ್ಲಿ "ಸಾರ್ವಜನಿಕ ಆರೋಗ್ಯ ಎಂಜಿನಿಯರಿಂಗ್" (Public Health Engineering) ಕುರಿತ ಯು.ಜಿ.ಸಿ., ಎಸ್.ಎ.ಪಿ. ಡಿ.ಆರ್.ಎಸ್-I ಯೋಜನೆಯನ್ನು ಪೂರ್ಣಗೊಳಿಸಿದ್ದಾರೆ.. ಪ್ರಸ್ತುತ, ಕರ್ನಾಟಕ ಸರ್ಕಾರದ ಬೆಂಗಳೂರಿನ ಡಿ. ದೇವರಾಜ ಅರಸು ಸಂಶೋಧನಾ ಕೇಂದ್ರದಿಂದ ಮಂಜೂರಾದ “ಘಿಸಾಡಿ ಜಾತಿ/ಸಮುದಾಯದ ಮಾನವಶಾಸ್ತ್ರೀಯ ಅಧ್ಯಯನ” (Ethnographic Study of Ghisadi Caste/Community) ಎಂಬ ಪ್ರಮುಖ ಯೋಜನೆಯಲ್ಲಿ ತೊಡಗಿಸಿಕೊಂಡಿದ್ದಾರೆ.

ಕರ್ನಾಟಕ ಸಮಾಜಶಾಸ್ತ್ರ ಸಂಘದ (ರಿ.) ಜಂಟಿ ಕಾರ್ಯದರ್ಶಿಯಾಗಿ ಮತ್ತು ಸಂಶೋಧನಾ ಸಮಿತಿಗಳ ಸಂಚಾಲಕರಾಗಿ ಕಾರ್ಯನಿರ್ವಹಿಸಿದ್ದಾರೆ. ಪ್ರಸ್ತುತ ಭಾರತೀಯ ಸಮಾಜಶಾಸ್ತ್ರೀಯ ಸಂಸ್ಥೆಯ (ರಿ.) ಸಂಶೋಧನಾ ಸಮಿತಿಯ (RC-18, ಸಾಮಾಜಿಕ ಜನಸಂಖ್ಯಾಶಾಸ್ತ್ರ) ಸಹ-ಸಂಚಾಲಕರಾಗಿ ಸೇವೆ ಸಲ್ಲಿಸುತ್ತಿದ್ದು, ನ್ಯಾಕ್ (NAAC) ಪೀರ್ ತಂಡಗಳಲ್ಲಿ ಸದಸ್ಯರಾಗಿ ಮತ್ತು ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದಾರೆ.

ನವದೆಹಲಿಯ ಐಸಿಎಸ್ಎಸ್ಆರ್ (ICSSR) ಪ್ರಾಯೋಜಕತ್ವದಲ್ಲಿ 2014 ರಲ್ಲಿ ಜಪಾನ್‌ನ ಯೊಕೊಹಾಮಾಕ್ಕೆ ಭೇಟಿ ನೀಡಿ ತಮ್ಮ ಸಂಶೋಧನಾ ಪ್ರಬಂಧಗಳನ್ನು ಮಂಡಿಸಿದರು. ಇಂಟರ್ನ್ಯಾಷನಲ್ ಸೋಷಿಯಲಾಜಿಕಲ್ ಅಸೋಸಿಯೇಷನ್ (ISA), ವಿಶ್ವ ಸಮಾಜಶಾಸ್ತ್ರ ಕಾಂಗ್ರೆಸ್ ಮತ್ತು ಐಎಸ್ಎ ಫೋರಮ್ ಆಫ್ ಸೋಷಿಯಾಲಜಿಯಲ್ಲಿ ಸಂಶೋಧನಾ ಪ್ರಬಂಧಗಳನ್ನು ಪ್ರಸ್ತುತಪಡಿಸಲು 2016 ರಲ್ಲಿ ಆಸ್ಟ್ರಿಯಾದ ವಿಯೆನ್ನಾ ವಿಶ್ವವಿದ್ಯಾಲಯಕ್ಕೆ, 2018 ರಲ್ಲಿ ಕೆನಡಾದ ಟೊರೊಂಟೊಗೆ, 2023 ರಲ್ಲಿ ಆಸ್ಟ್ರೇಲಿಯಾದ ಮೆಲ್ಬೋರ್ನ್‌ಗೆ ಮತ್ತು 2025 ರಲ್ಲಿ ಮೊರಾಕ್ಕೊದ ರಬಾತ್‌ಗೆ ಭೇಟಿ ನೀಡಿ ವಿಚಾರ ಸಂಕಿರಣದಲ್ಲಿ ಭಾಗಿಯಾಗಿ ಸಂಶೋಧನಾ ಲೇಖನ ಮಂಡಿಸಿದ್ದಾರೆ,

ಶೈಕ್ಷಣಿಕ ಪರಿಣಿತ ಕ್ಷೇತ್ರದಲ್ಲಿನ ಸಾಧನೆಗಾಗಿ ರಾಣಿ ಚನ್ನಮ್ಮ ವಿಶ್ವ ವಿದ್ಯಾಲಯದಿಂದ, ತಮ್ಮ ಪರಿಣತಿಯ ಕ್ಷೇತ್ರದಲ್ಲಿನ ಅತ್ಯುತ್ತಮ ಕೊಡುಗೆಗಾಗಿ ಪ್ರಶಂಸನಾ ಪ್ರಮಾಣಪತ್ರ ನೀಡಿ ಗೌರವಿಸಲಾಗಿದೆ ಹಾಗೂ ಇವರ ಶೈಕ್ಷಣಿಕ, ಸಾಮಾಜಿಕ ಮತ್ತು ಲಿಂಗಾಧಾರಿತ ವಿಷಯ ಕುರಿತು ಕೈಗೊಂಡಿರುವ ಕಾರ್ಯಚಟುವಟಿಕೆಗಳನ್ನು ಗುರುತಿಸಿ, ಮಾನವ ಬಂಧುತ್ವ ವೇದಿಕೆಯು 'ಸಾವಿತ್ರಿ ಬಾಯಿ ಪುಲೆ' ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಕರ್ನಾಟಕ ಸೋಶಿಯಾಲಾಜಿ ಅಸೋಸಿಯೇಶನ್‌ನ (ರಿ.) ಕಾರ್ಯಕಾರಿ ಸದಸ್ಯಳಾಗಿ, ಸಂಘದ ಸಂಶೋಧನಾ ಸಮಿತಿಯ ಕನ್ವೇನರ್‌ಯಾಗಿ, ಇಂಡಿಯನ್ ಸೋಶಿಯಲಾಜಿಕಲ್ ಸೊಸೈಟಿಯ RC-18 ಸಂಶೋಧನಾ ಕನ್ವೆನರ್ ಆಗಿ ಕಾರ್ಯನಿರ್ವಹಿಸಲಾಗುತ್ತಿದೆ. NAAC PEER ಕಮಿಟಿಯ ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಸಾಮಾಜಿಕ ಹಿತದೃಷ್ಟಿಯ ಕಾಳಜಿ ಮತ್ತು ತೊಡಗಿಸಿಕೊಳ್ಳುವಿಕೆಯೊಂದಿಗೆ ಲಿಂಗ ಸಂಬಂಧಿತ ವಿಷಯಗಳಲ್ಲಿ ಶೈಕ್ಷಣಿಕ ಕಾರ್ಯವನ್ನು ಸಾಮಾಜಿಕ

ಚಟುವಟಿಕೆಗಳೊಂದಿಗೆ ಸಮನ್ವಯಗೊಳಿಸಿದ್ದಾರೆ.